ಆಗಿದೆ. ಇಡಗೂರು ಜನರು ಬೆಂಗಳೂರಿಗೆ ಬರಬೇಕಾದರೆ, ತುಮಕೂರಿಗೆ ಬಂದು ಅಲ್ಲಿಂದ ಬೆಂಗಳೂರಿಗೆ ಬರಬೇಕಾಗಿರುವುದರಿಂದ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ದಯವಿಟ್ಟು ಇದನ್ನು ಪುನಃ ವಿಚಾರ ಮಾಡಿ ಮತ್ತೆ ಇಡಗೂರಿನಿಂದ ಬೆಂಗಳೂರಿಗೆ ಬಸ್ ಓಡಿಸುವ ಹಾಗೆ ಮಾಡಿದರೆ ಒಳ್ಳೆಯದಾಗುತ್ತದೆ.

ಮತ್ತೆ ನಾನು ಕೇಳಿರುವ ೨ ' ಪ್ರಶ್ನೆಗೆ ಹೌದು ಎಂದೂ ಉತ್ತರ ಕೊಟ್ಟಿದ್ದಾರೆ ಆದ್ದರಿಂದ ದಯವಿಟ್ಟು ಈ ವಿಷಯವನ್ನು ವಿಚಾರ ಮಾಡಿ ಕೆ.ಎಸ್.ಆರ್.ಟಿ.ಸಿ. ಬಸ್‌ನ್ನು ಇಡುಗೂರಿಗೆ ಬರುವ ಹಾಗೆ ಮಾಡಿ. ಇದನ್ನು ಆದಷ್ಟು ಬೇಗ ಮಾಡಿಕೊಡಬೇಕೆಂದೂ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಪರಿಶೀಲನೆ ಮಾಡುತ್ತೇನೆ.

ಬೀಳಗಿ ಪುರಸಭೆಗೆ ನೀರು ಸರಬರಾಜು ವ್ಯವಸ್ಥೆ ಬಗ್ಗೆ

೧೧೪೨. ಶ್ರೀ ಬಾಬುರೆಡ್ಡಿ. ತುಂಗಳ.— ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡಲ ಪಂಚಾಯಿತಿ ಕ್ಷೇತ್ರದ ಪುನರಚನೆಯನ್ವಯ ಬೀಳಗಿ ಪುರಸಭೆ ಈಗ ಮಂಡಲ ಪಂಚಾಯಿತಿ ಆಗಿ ಪರಿವರ್ತನೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ತಾಲ್ಲೂಕು ಕೇಂದ್ರ ಸ್ಥಾನವಾಗಿರುವ ಬೀಳಗಿಯಲ್ಲಿ ಅಸ್ತಿತ್ವದಲ್ಲಿರುವ ನೀರು ಪೂರೈಕೆ ವ್ಯವಸ್ಥೆ ಪದೇ ಪದೇ ಕೆಟ್ಟುಹೋಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಶಾಶ್ವತ ಪರಿಹಾರದ ಕುರಿತು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ನೀರು ಪೂರೈಕೆ ವ್ಯವಸ್ಥೆ ಕೆಟ್ಟುಹೋಗಿಲ್ಲ. ಮೂಲದಲ್ಲಿ ನೀರು ಕಡಿಮೆಯಾಗಿದೆ.

ಇ) ಶಾಶ್ವತ ಪರಿಹಾರಕ್ಕಾಗಿ ಬೀಳಗಿ ಪಟ್ಟಣದ ನೀರು ಸರಬರಾಜು ಸುಧಾರಣೆ ಯೋಜನೆಯನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಅಧ್ಯಕ್ಷರೇ, ಇಷ್ಟು ದಿವಸ ಬೀಳಗಿ ಗ್ರಾಮ ಪುರಸಭೆಯಾಗಿತ್ತು. ಇತ್ತೀಚೆಗೆ ಮಂಡಲ್ ಪಂಚಾಯಿತಿ ಕೇಂದ್ರವನ್ನಾಗಿ ಮಾಡಿದೆ. ಇದರಿಂದ ಇಲ್ಲಿ ಬಹಳ ಗೊಂದಲ ಪರಿಸ್ಥಿತಿ ಉಂಟಾಗಿದೆ. ೧೨ ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ಶಾಶ್ವತವಾದ ಕುಡಿಯುವ ನೀರಿನ ಯೋಜನೆಯನ್ನು ತಯಾರು ಮಾಡಿದ್ದಾರೆ. ಇದನ್ನು ಕೆ.ಯು.ಡಬ್ಲ್ಯು. ಎಸ್. ನವರು ತೆಗೆದುಕೊಳ್ಳುವುದಿಲ್ಲವೆಂಬ ಸಂಶಯ ಮೂಡಿದೆ. ಮೂಲ ಯೋಜನೆಯನ್ನು ಕೈಬಿಟ್ಟು ನಡೆಯುತ್ತಿರುವ ಕೆಲಸ ನಡೆದಿದೆ ಅಲ್ಲಿ ಶಾಶ್ವತವಾದ ಕುಡಿಯುವ ನೀರಿನ ಪರಿಹಾರವನ್ನು ಮಾಡದೇ ಹೋದರೆ ತೊಂದರೆಯಾಗುತ್ತದೆ . ಬೀಳಗಿ ನಗರಕ್ಕೆ ಕೃಷ್ಣಾನದಿ ೭ ಕಿ.ಮೀ. ದೂರ ಇದೆ. ಅಲ್ಲಿಂದ ನೀರು ತರುವ ಪ್ರಯತ್ನ ಮಾಡಿದರೆ ಒಳ್ಳೆಯದು ಅಲ್ಲದೆ ಈಗ ಆಸ್ಪತ್ರೆಯ ಜನಗಳಲ್ಲಿ ಬಂದಿರುವ ಸಂಶಯ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ, ಜನಗಳ ಸಂಶಯಕ್ಕೆ ಏನೂ ಕಾರಣ ಇಲ್ಲ. ಈಗ ಕೈಗೊಂಡಿರತಕ್ಕ ನೀರು ಪೂರೈಕೆ ಕಾರ್ಯಕ್ರಮ ನಿಂತು ಹೋಗುತ್ತದೆಂದು ಎಂದೂ ಹೇಳಿಲ್ಲ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಶಾಶ್ವತವಾದ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದೆಂದು ನನ ಉತ್ತರದಲ್ಲಿಯೂ ಹೇಳಿದ್ದೇನೆ ಮುಂದಿನ ಮಾರ್ಚ್, ಏಪ್ರಿಲ್‌ವರೆಗೆ, ಅಂದರೆ ಮಳೆ ಬರುವವರೆಗೆ ನೀರಿನ ತೊಂದರೆ ಇರುತ್ತದೆ ಎನ್ನುವ ಮಾತನ್ನು ಒಪ್ಪಿಕೊಳ್ಳುತ್ತೇನೆ. ಬರಗಾಲದ ಹಣದಲ್ಲಿ ಹೆಚ್ಚು ಕೊಳವೆ

ಬಾವಿಗಳನ್ನು ಹಾಕಿಸಬೇಕೆಂಬ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. ಈ ವಿಚಾರದಲ್ಲಿ ನಿರ್ಣಯ ತೆಗೆದುಕೊಳ್ಳತಕ್ಕ ಅಧಿಕಾರವನ್ನು ಆಲ್ಲಿನ ಡೆಪ್ಯುಟಿ ಕಮೀಷನರ್ ಮತ್ತು ಮಾನ್ಯ ತಂಗಳ್ ಅವರಿಗೇ ಬಿಟ್ಟಿದ್ದೇನೆ. ಹೆಚ್ಚು ಕೊಳವೆ ಬಾವಿಗಳನ್ನು ಹಾಕಿ ಆಲ್ಲಿನ ನೀರಿನ ಬವಣೆಯನ್ನು ಕಡಿಮೆ ಮಾಡಲಾಗುವುದೆಂದು ಹೇಳುತ್ತೇನೆ.

ಶ್ರೀ ಕೆ. ಮಲ್ಲಪ್ಪ.— ಇತ್ತೀಚೆಗೆ ಪಟ್ಟಣಗಳನ್ನು ಮುಂಡಲ್ ಪಂಚಾಯಿತಿಗಳಾಗಿ ಪರಿವರ್ತಿಸಿರುವುದರಿಂದ, ಕೆ. ಯು. ಡಬ್ಲ್ಯು. ಎಸ್. ನವರು ಇಂತಹ ಪಟ್ಟಣಗಳಿಗೆ ನೀರು ಪೂರೈಸುವ ಸಾಧ್ಯತೆ ಇದೆಯೇ?

ಶ್ರೀ ಎ. ಲಕ್ಷ್ಮೀಸಾಗರ್.— ಏನೂ ತೊಂದರೆ ಇಲ್ಲ. ಅವರು ತೆಗೆದುಕೊಳ್ಳುತ್ತಾರೆ.

ಬಂಗಾರಂಪೇಟೆ ಪುರಸಭೆಯಂ ಕುಡಿಯುವ ನೀರು ಸರಬರಾಜಿನ ಬಗ್ಗೆ

೩೪೪. ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ೧೯೪೭ನೇ ಸಾಲಿನಲ್ಲಿ ಬಂಗಾರಪೇಟೆಯ ಪುರಸಭಾ ವ್ಯಾಪ್ತಿಯಲ್ಲಿನ ಜನಸಂಖ್ಯೆ ಎಷ್ಟಿತ್ತು? ಹಾಗೂ ೧೯೮೫ನೇ ಸಾಲಿನಲ್ಲಿರುವ ಜನಸಂಖ್ಯೆ ಎಷ್ಟು?

ಆ) ಆಲ್ಲಿ ಕುಡಿಯುವ ನೀರನ್ನು ತಲಾವಾರು ಎಷ್ಟು ಗ್ಯಾಲನ್ ಕೊಡಲಾಗುತ್ತಿದೆ ಹಾಗೂ ಆಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ವ್ಯವಸ್ಥೆಯನ್ನು ಸರಿಪಡಿಸಲು ಕೈಗೊಂಡ ಕ್ರಮವೇನು?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ೧೯೪೭ನೇ ಸಾಲಿನಲ್ಲಿ ಬಂಗಾರಪೇಟೆ ಪುರಸಭೆ ವ್ಯಾಪ್ತಿಯಲ್ಲಿನ ಜನಸಂಖ್ಯೆ ಸುಮಾರು ೯,೦೦೦ ಇತ್ತು ಹಾಗೂ ೧೯೮೫ನೇ ಸಾಲಿನಲ್ಲಿರುವ ಜನಸಂಖ್ಯೆಯು ಸುಮಾರು ೩೦,೦೦೦ ಇದೆ.

ಆ) ಈ ಪಟ್ಟಣದಲ್ಲಿ ದಿನಂಪ್ರತಿ ತಲಾ ೧೦.೫೦ ಗ್ಯಾಲನ್ ಕುಡಿಯುವ ನೀರು ಒದಗಿಸಲಾಗುತ್ತಿದೆ.

ಬಂದಿದೆ.

ಇ) ಈ ಪಟ್ಟಣಕ್ಕೆ ೩೬.೦೦ ಲಕ್ಷ ರೂ. ಗಳ ಅಭಿವೃದ್ಧಿ ಯೋಜನೆ ಮಂಜೂರಾಗಿದ್ದು ಇದರ ಕೆಲಸಗಳು ಪ್ರಗತಿಯಲ್ಲಿವೆ.

ಈ ಅಭಿವೃದ್ಧಿ ಯೋಜನೆಯು ಪೂರ್ಣಗೊಂಡ ಬಳಿಕ ಪಟ್ಟಣದ ನೀರು ಸರಬರಾಜು ಉತ್ತಮವಾಗಲಿದೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ಬಂಗಾರಪೇಟೆ ನಗರದಲ್ಲಿ ಸರಾಸರಿ ೩೦ ಗ್ಯಾಲನ್ ನೀರು ಕೊಡಬೇಕು ಕಾವೆ ಈಗಾಗಲೇ ಹಾಕಿಕೊಂಡಿರತಕ್ಕ ಯೋಜನೆಯನ್ನು, ಯಾವ ನಿರ್ದಿಷ್ಟ ಕಾಲದಲ್ಲಿ ಪೂರೈಸುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ).— ಮಾನ್ಯ ಅಧ್ಯಕ್ಷರೇ, ನಾನು ಬೇಗ ಮಾಡುತ್ತೇನೆಂದು ಈಗಾಗಲೇ ಹೇಳಿದ್ದೇನೆ, ಕೆಲಸಗಳು ಈಗಾಗಲೇ ತ್ವರಿತಗತಿಯಲ್ಲಿ ನಡೆಯುತ್ತಿವೆ. ೫ ಕೊಳವೆ ಬಾವಿಗಳಿಂದ ಗಂಟೆಗೆ ೧೨,೬೦೦ ಗ್ಯಾಲನ್ ನೀರು ಒದಗುತ್ತಿದೆ. ಆ ಪಟ್ಟಣಕ್ಕೆ ೧೦.೫೦ ಗ್ಯಾಲನ್ ನೀರು ಕೊಡತಕ್ಕಂಥ ಕಾರ್ಯಕ್ರಮ ನಡೆಯುತ್ತಿದೆ. ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟಿದ್ದಾರೆ. ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಚುಕ್ಕೆ ಪ್ರಶ್ನೆ: ೫೨೪ (೧೩೨೮)
(ಮಾನ್ಯ ಸದಸ್ಯರು ಗೈರು ಹಾಜರು)
ಚುಕ್ಕೆ ಪ್ರಶ್ನೆ: ೫೨೫ (೯೪೫)
(ಮಾನ್ಯ ಸದಸ್ಯರು ಗೈರು ಹಾಜರು)